( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ 24/02/2022**
**ಅಸಲು ದಾವೆ.ನಂ. 161/2019**
**ಪಿ.ಡಬ್ಲ್ಯೂ 1**

( ಮುಂದುವರೆದ ಪಾಟೀ ಸವಾಲುಃ ಶ್ರೀ. ಜೆ.ಎಸ್. ವಕೀಲರಿಂದ ಪ್ರತಿವಾದಿಯರ ಪರ )

ದಾವಾ ಸ್ವತ್ತು ಮತ್ತು ಅದರ ಉತ್ತರ ದಿಕ್ಕಿಗೆ ಇರುವ ನನ್ನ ತಮ್ಮ ಸುಬ್ಬೇಗೌಡ ಎಂದರೆ 2 ನೇ ಪ್ರತಿವಾದಿಯ ಜಮೀನುಗಳು ಅಡಿಕೆ ತೋಟ ಆಗಿದ್ದು, ಅವುಗಳು ನಾವು ಪಡೆಯು ಮುಂಚೆಯೇ ಆ ರೀತಿ ಅಡಿಕೆ ತೋಟ ಆಗಿದ್ದವು. ಅವುಗಳನ್ನು ನಮ್ಮ ತಂದೆ ಅವರ ತಮ್ಮಂದಿರೊಂದಿಗೆ ಒಟ್ಟು ಕುಟುಂಬದಲ್ಲಿ ಇದ್ದಾಗ ಮಾಡಿದ ತೋಟಗಳು ಅಥವಾ ನಮ್ಮ ತಾತ ಮಾಡಿದ ತೋಟಗಳು ಎಂದು ನನಗೆ ಗೊತ್ತಿಲ್ಲ. ನನಗೆ ಈಗ 75 ವರ್ಷ ವಯಸ್ಸು. ದಾವಾ ಸ್ವತ್ತಿನಲ್ಲಿ ನನಗೆ ಬುದ್ದಿ ಬಂದಾಗಿನಿಂದ ಅಡಿಕೆ ತೋಟದಿಂದ ಫಸಲು ಬರುತ್ತತ್ತಾ ಎಂದರೆ ಸಾಕ್ಷಿಯು ಕುಸುಮರವರು ಸದರಿ ಸ್ವತ್ತನ್ನು ಪಡೆದಾಗಿನಿಂದ ಫಸಲು ಬರುತ್ತಿತ್ತು ಎಂದು ನುಡಿಯುತ್ತಾರೆ. ದಾವಾ ಸ..ನಂಃ 40/2 ಎ ನಲ್ಲಿ ಒಟ್ಟು 2 ಎಕರೆ 23 ಗುಂಟೆಇದ್ದು, ಸದರಿ ಜಮೀನಿನಲ್ಲಿ ಮೊದಲು ಒಂದು ತೆರೆದ ಬಾವಿ ಇತ್ತು ಎಂದರೆ ಸರಿ. ಸದರಿ ಬಾವಿಯಿಂದಲೇ ನಮ್ಮ ಜಮೀನಿಗೆ ಹಾಗೂ ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ಇರುವ 2 ನೇ ಪ್ರತಿವಾದಿಯ 1 ಎಕರೆ 19 ಗುಂಟೆ ಜಮೀನಿಗೆ ನೀರು ತಗೆದುಕೊಂಡು ಹೋಗಲಾಗುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ತೆರೆದ ಬಾವಿ ಕುಸುಮರವರಿಗೆ ಮಾತ್ರ ಸೇರಿದ್ದು ಆಗಿರುತ್ತದೆ ಎಂದು ನುಡಿಯುತ್ತಾರೆ ದಾವಾ ಸರ್ವೆ ನಂಬರ್ ಆದ 40/2 ಎ ಜಮೀನಿನಲ್ಲಿ ನಮ್ಮ ತಂದೆ ಹಾಗೂ ಚಿಕ್ಕಪ್ಪನ ನಡುವೆ ಆದ ಹಿಸ್ಸೆಯ ಪ್ರಕಾರ ನಮ್ಮ ತಂದೆಯವರಿಗೆ 1 ಎಕರೆ 19 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ನಮ್ಮ ತಂದೆಯ ಹಿಸ್ಸೆಗೆ ಬಂದ ಆಸ್ತಿಗಳನ್ನು ನಾನು ಹಾಗೂ ನನ್ನ ಅಣ್ಣತಮ್ಮಂದಿರು ಪಾಲು ಮಾಡಿಕೊಂಡಾಗ, ಸದರಿ 1 ಎಕರೆ 19 ಗುಂಟೆ ಜಮೀನು ನನ್ನ ತಮ್ಮನಾದ 2 ನೇ ಪ್ರತಿವಾದಿಯ ಹಿಸ್ಸೆಗೆ ಹೋಯಿತು ಎಂದರೆ ಸರಿ.

ನನ್ನ ತೋಟದಲ್ಲಿರುವ ಅಡಿಕೆ ಮರಗಳು ಸುಮಾರು 30 ವರ್ಷ ಹಳೆಯ ಮರಗಳು ಆಗಿರುತ್ತವೆ. ನನ್ನ ಮತ್ತು 2 ನೇ ಪ್ರತಿವಾದಿಯ ಮನೆಗಳು ಅಕ್ಕಪಕ್ಕ ಇರುತ್ತವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಒಂದೇ ಮನೆಯಲ್ಲಿ ಭಾಗ ಮಾಡಿಕೊಂಡಿರುವುದಾಗಿ ನುಡಿಯುತ್ತಾರೆ. ಸದರಿ ನನ್ನ ಹಾಗೂ 2 ನೇ

ಪ್ರತಿವಾದಿಯ ಮನೆಯಿಂದ ದಾವಾ ಸ್ವತ್ತು ಸುಮಾರು ಮುಕ್ಕಾಲು ಕಿ.ಮಿ.ಯ ಅಂತದರಲ್ಲಿ ಇದೆ. ನಾನು ನನ್ನ ಮನೆಯಿಂದ ದಾವಾ ಸ್ವತ್ತಿಗೆ ಹೋಗಬೇಕಾದರೆ ದೇವರಾಜೇಗೌಡ, ಪುಟ್ಟೇಗೌಡ, ಜವರೇಗೌಡ, ಚಂದ್ರೇಗೌಡ, ಕುಮಾರ ಮತ್ತು ಸ್ವಾಮಿಗೌಡ ಹೀಗೆ 8-10 ಜನರ ಜಮೀನುಗಳನ್ನು ದಾಟಿ ಹೋಗಬೇಕು ಎಂದರೆ ಸರಿ. ನನ್ನ ತಮ್ಮನಾದ 2 ನೇ ಪ್ರತಿವಾದಿಯು ಸಹ ಆತನ ಮನೆಯಿಂದ ಆತನ ಜಮೀನಿಗೆ ಹೋಗಬೇಕಾದರೆ ಇವರುಗಳ ಜಮೀನುಗಳನ್ನು ದಾಟಿಯೇ ಹೋಗಬೇಕು ಎಂದರೆ ಸರಿ. ಸದರಿಯವರು ದೊಡ್ಡಗಾವನಹಳ್ಳಿ ಗ್ರಾಮದವರು. ಆ ರೀತಿ ಸದರಿ ಜಮೀನುಗಳನ್ನು ದಾಟಿಕೊಂಡು ಸುಮಾರು 8-10 ವರ್ಷಗಳಿಂದ ನನ್ನ ಜಮೀನಿಗೆ ಹೋಗುತ್ತಿದ್ದೇನೆ. ಮೇಲೆ ಹೇಳಿದ 8-10 ಜನರು ನಾನಾಗಲೀ ಅಥವಾ 2 ನೇ ಪ್ರತಿವಾದಿಯಾಗಲೀ ನಮ್ಮ ಜಮೀನುಗಳಿಗೆ ಅವರ ಜಮೀನುಗಳ ಮೂಲಕ ಹಾದು ಹೋಗಬೇಕಾದರೆ ಎಂದಿಗೂ ನಮ್ಮನ್ನು ತಡೆದಿರುವುದಿಲ್ಲ.

ಚಿಕ್ಕಗಾವನಹಳ್ಳಿಯಲ್ಲಿ ಇರುವ ನನ್ನ ಮನೆಯಿಂದ ಅಕರಲಗೂಡು ಹೊಳೆನರಸೀಪುರ ಮುಖ್ಯ ರಸ್ತೆಯ ಮೇಲೆ ಹೋಗಿ ನಂತರ ದಾವಾ ಸ್ವತ್ತು ಬರುತ್ತದೆ ಎಂದರೆ ಸರಿ. ಸಾಕ್ಷಿಗೆ ಒಂದು ಕಚ್ಚಾ ನಕ್ಷೆಯನ್ನು ತೋರಿಸುತ್ತಿದ್ದು, ಅದರಲ್ಲಿ ತೋರಿಸಿದ ದಾರಿಯ ಮುಾಲಕವೇ ದಾವಾ ಸ್ವತ್ತಿಗೆ ಹೋಗಬೇಕು ಎಂದು ಒಪ್ಪಿದ ಕಾರಣ ಸದರಿ ಕಚ್ಚಾ ನಕ್ಷೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ 4 ಛಾಯ ಚಿತ್ರ ಗಳನ್ನು ತೋರಿಸಿದ್ದು, ಅದರಲ್ಲಿ ಕಾಣುತ್ತಿರುವ ಅಡಿಕೆ ತೋಟಗಳು 2 ನೇ ಪ್ರತಿವಾದಿಗೆ ಸೇರಿದ್ದು ಹಾಗೂ ಅದರಲ್ಲಿ ಕಾಣುತ್ತಿರುವ ವ್ಯಕ್ತಿ 2 ನೇ ಪ್ರತಿವಾದಿ ಎಂದು ಒಪ್ಪಿದ ಕಾರಣ ಸದರಿ ಛಾಯ ಚಿತ್ರ ಗಳನ್ನು ನಿಡಿ-2 ರಿಂದ ನಿಡಿ-5 ಎಂದು ಗುರುತಿಸಲಾಯಿತು. ನಿಡಿ-2, ನಿಡಿ-4 ಮತ್ತು ನಿಡಿ-5 ರಲ್ಲಿ 2 ನೇ ಪ್ರತಿವಾದಿ ನಿಂತಿರುವ ಜಾಗವೇ ತಿರುಗಾಡಲು ಬಿಟ್ಟುಕೊಂಡ 8 ಅಡಿ ಜಾಗ ಎಂದರೆ ಸರಿಯಲ್ಲ. ಛಾಯ ಚಿತ್ರ ಗಳಲ್ಲಿ ಕಾಣುತ್ತಿರುವ ಜಮೀನು ನನ್ನ ಜಮೀನಿನ ಪೂರ್ವ ದಿಕ್ಕಿನಲ್ಲಿ ಇದೆ ಎಂದರೆ ಸರಿ. ನಿಪಿ-5 ರಲ್ಲಿ ಕಾಣುತ್ತಿರುವ ಸರ್ವೆ ನಂಬರ್ 40/2 ಎ 3 ಎಂದರೆ ಪ್ರತಿವಾದಿಗೆ ಸೇರಿದ ಆಸ್ತಿಯ ಪಶ್ಚಿಮಕ್ಕೆ ಉತ್ತರಕ್ಕೆ ಹಾಗೂ ಪೂರ್ವ ದಿಕ್ಕಿಗೆ ಕರೆಕೋಡಿ ಕಾಲುವೆ ಇದೆ ಎಂದರೆ ಸರಿ. ಸದರಿ 3 ದಿಕ್ಕಿಗೆ ಕಾಲುವೆ ಇರುವುದರಿಂದ ದಾವಾ ಸ್ವತ್ತಿನಲ್ಲಿ ತಿರುಗಾಡಲು ಬಿಟ್ಟ ಜಾವನ್ನು ಹೊರತು ಪಡಿಸಿ ಪ್ರತಿವಾದಿಯರಿಗೆ ಅವರ ಜಮೀನುಗಳಿಗೆ ಹೋಗಲು ಯಾವುದೇ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪಶ್ಚಿಮ ದಿಕ್ಕಿಗೆ ತಿರುಗಾಡಲು ಜಾಗ ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರಿಗೆ ತಿರುಗಾಡಲು ದಾವಾ ಸ್ವತ್ತಿನ ಪಶ್ಚಿಮ

ದಿಕ್ಕಿಗೆ ಯಾವುದೇ ದಾರಿ ಇರುವುದಿಲ್ಲ. ಆದರೆ ದಾವಾ ಸ್ವತ್ತಿನ ಪೂರ್ವ ದಿಕ್ಕಿಗೆಮಾತ್ರ ದಾರಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಇರುವ ತಂತಿ ಬೇಲಿ ನಾನು ಸದರಿ ಸ್ವತ್ತನ್ನು ಕುಸುಮರವರಿಂದ ಖರೀದಿಸುವ ಮೊದಲೇ ಇತ್ತು.

(ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಅನುಮತಿಸಲಾಯಿತು)

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )**

**ಓ.ಹೇ.ಕೇ.ಸ.ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**

**ಜೆ.ಎಂ.ಎಫ್.ಸಿ,ಅರಕಲಗೂಡು.**